ಗ್ರಾಮ ಎಂದು ಅಲ್ಲ. ಕರಕುಂಟ, ಹಳಿಯಾಳ, ತೇಲ್‌ಪುರ ಎಡಗಾ ಗ್ರಾಮಗಳು ಈ ಗ್ರಾಮಗಳಲ್ಲಿ ಏತ ನೀರಾವರಿ ಯೋಜನೆ ಮಂಜೂರಾಗಿ ಕಾಗಿನದಲ್ಲಿ ದಂಡೆಯಮೇಲೆ ಪ್ರಾರಂಭಿಸಲು 30-6-92ರಂದು ಸರ್ಕಾರದ ಪತ್ರ 3 : 92ರಲ್ಲಿ ಆದೇಶ ನೀಡಿಲ್ಲವೆ? ಇದರ ಬಗ್ಗೆ ಉತ್ತರವಿಲ್ಲ ಏಕೆ?

ಡಾ॥ ಆರ್. ಬಿ. ಚೌಧರಿ : ಕೇವಲ ಹಾಬಾಳ ಏತ ನೀರಾವರಿ ಬಗ್ಗೆ ಮಾತ್ರ ಬಂದಿದೆ. ಆದರ ಬಗ್ಗೆ ಉತ್ತರ ಒದಗಿಸಲಾಗಿದೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ನಾನು ಕೇಳಿದ್ದುದು ಹಾಬಾಳ, ಕರಕುಂಟ, ಹಳಿಯಾಳ, ತೇಲ್‌ಪುರ ಎಡಗಾ ಎಂದು, ಇದರ ಬಗ್ಗೆ ಏಕೆ ಉತ್ತರವಿಲ್ಲ? ಈ ರೈತರನ್ನು ಸಂಪರ್ಕಿಸಿದವರು ಯಾರು? ಮುಚ್ಚಳಿಕೆ ನೀಡಿಲ್ಲವೆಂದು ಹೇಳಿದ್ದಾರೆ. ನೀರಿನ ದರದ ಬಗ್ಗೆ ರೈತ ಫಲಾನುಭವಿಗಳು ಮುಚ್ಚಳಿಕೆ ನೀಡಿಲ್ಲ ಎಂದು ಹೇಳಿದ್ದಾರೆ. ಅವರನ್ನು ಕೇಳಿದವರು ಯಾರು? ಈಗಲಾದರೂ ಎಂಟು ದಿನದೊಳಗೆ ನಾನು ಅವರಿಂದ ನೀರಿನ ದರದ ಬಗ್ಗೆ ಮುಚ್ಚಳಿಕೆ ಬರೆಸಿಕೊಡುತ್ತೇನೆ. 1992-93ನೇ ಸಾಲಿನಲ್ಲಿ ಈ ಯೋಜನೆಯನ್ನು ಪ್ರಾರಂಭಿಸಲು ಆದೇಶ ನೀಡಬೇಕೆಂದು ವಿನಂತಿಸುತ್ತೇನೆ.

ಡಾ॥ ಆರ್. ಬಿ. ಚೌಧರಿ : ಈ ಒಂದು ಏತ ನೀರಾವರಿ ನಿಗಮ 1986ರಲ್ಲಿ ಪ್ರಾರಂಭವಾದದ್ದು 5 ವರ್ಷಗಳವರೆಗೆ ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಿಲ್ಲ. ಆದುದರಿಂದ ಎಸ್ಟಾಬ್ಲಿಷ್‌ಮೆಂಟ್‌ಗೆ ಮಾತ್ರ ಖರ್ಚು ಮಾಡಲಾಯಿತು. ಅದರ ಸಲುವಾಗಿ ಏಪ್ರಿಲ್‌ನಿಂದ ಈ ನಿಗಮವನ್ನು ರದ್ದುಪಡಿಸಲು ಸರ್ಕಾರ ತೀರ್ಮಾನ ಕೈಗೊಂಡಿದೆ. ಈ ತೀರ್ಮಾನ ಕೈಗೊಳ್ಳಲಿಕ್ಕೆ ಮುಖ್ಯ ಕಾರಣ ಎಂದರೆ, ರೈತರು ಮುಚ್ಚಳಿಕೆ ಕೊಟ್ಟಿಲ್ಲ ಎನ್ನುವುದರಿಂದ ನಿಗಮವನ್ನು ರದ್ದುಪಡಿಸಬೇಕಾದ ಪರಿಸ್ಥಿತಿ ಬಂದೊದಗಿದೆ. ಆದುದರಿಂದ ಮುಂದೆ ಏಪ್ರಿಲ್‌ನಲ್ಲಿ ನಿಗಮವನ್ನು ರದ್ದುಪಡಿಸಿದ ನಂತರ, ಮಾನ್ಯ ಸದಸ್ಯರು ಏನು ಹೇಳಿದಂಥ ಏತ ನೀರಾವರಿ ಕಾಮಗಾರಿಗಳನ್ನು ಯಾವ ಪ್ರಕಾರ ಮಾಡಬೇಕೆಂದು, ಅದು ಇನ್ನೂ ಪರಿಶೀಲನೆಯಲ್ಲಿರುವುದರಿಂದ ಪರಿಶೀಲನೆಯ ನಂತರ ಅವರು ಹೇಳಿದ ಏತ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಈಗ ಮಂಜೂರಾಗಿರುವ ಯೋಜನೆಗಳನ್ನು 1993-94ರ ಸಾಲಿನಲ್ಲಿ ತೆಗೆದುಕೊಳ್ಳಬಹುದೆ? ನಾವು 8 ದಿನಗಳೊಳಗೆ ಮುಚ್ಚಳಿಕೆಯನ್ನು ರೈತ ಫಲಾನುಭವಿಗಳಿಂದ ಬರೆಸಿಕೊಡುತ್ತೇವೆ.

ಡಾ॥ ಆರ್. ಬಿ. ಚೌಧರಿ : ಮಾನ್ಯ ಅಧ್ಯಕ್ಷರೇ, ಈಗ ಏತ ನೀರಾವರಿ ನಿಗಮಗಳನ್ನು ರದ್ದುಪಡಿಸುವ ನಿರ್ಣಯವನ್ನು ತೆಗೆದುಕೊಂಡಿರುವುದರಿಂದ ಮುಂದೆ ಯಾವ ಪ್ರಕಾರ ಈ ಕಾಮಗಾರಿಗಳನ್ನು ಮಾಡಬೇಕೆನ್ನುವುದು ಪರಿಶೀಲನೆಯಲ್ಲಿರುವುದರಿಂದ ಪರಿಶೀಲಿಸಿದ ನಂತರ ತಮ್ಮ ಪ್ರಶ್ನೆಗೆ ಉತ್ತರ ಸಿಗಬಹುದು.

ವಿಷಯ : ವಿದ್ಯುತ್ ಸಂಪರ್ಕ ಕಲ್ಪಿಸುವ ವಸ್ತುಗಳ ಕಳವು.

Q : 1344

ಶ್ರೀ ಆರ್. ಎನ್. ನಾಯ್ಕ (ಭಟ್ಕಳ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1992-93ನೇ ವರ್ಷ ಕೆ. ಇ. ಬಿ.ಗೆ ಸೇರಿದ ವಿದ್ಯುತ್ ಸಂಪರ್ಕ ಕಲ್ಪಿಸುವ ವಸ್ತುಗಳು ಕಳುವಾದ ಪ್ರಕರಣಗಳು ಎಷ್ಟು ಹಾಗೂ ಎಷ್ಟು ರೂಪಾಯಿ ಬೆಲೆ ಬಾಳುವಂಥವುಗಳು?

ಆ) 1990ರಿಂದ 1993 ಜನವರಿವರೆಗೆ ಭಟ್ಕಳ, ಹೊನ್ನಾವರ ತಾಲ್ಲೂಕಿನಲ್ಲಿ ವಿದ್ಯುತ್ ಸಂಪರ್ಕ ವಸ್ತುಗಳು ಕಳುವಾದ ಪ್ರಕರಣಗಳಲ್ಲಿ ಆರೋಪಿಗಳು ಪತ್ತೆ ಆಗಿದ್ದಾರೆಯೇ? (ಪ್ರಕರಣಗಳ ವಿವರ ನೀಡುವುದು?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು)

ಅ) 1992-93ನೇ ಸಾಲಿನಲ್ಲಿ ಫೆಬ್ರವರಿ 1993ರ ಅಂತ್ಯದವರೆಗಿನ ವಿವರಗಳು ಹೀಗಿವೆ :

ಪ್ರಕರಣಗಳ ಒಟ್ಟು ಸಂಖ್ಯೆ 443

ಕಳ್ಳತನವಾದ ವಸ್ತುಗಳ ಒಟ್ಟು ಮೌಲ್ಯ ಸುಮಾರು ರೂ. 49,96,175-00

ಆ) ಈ ಅವಧಿಯಲ್ಲಿ ಭಟ್ಕಳ ತಾಲ್ಲೂಕಿನಲ್ಲಿ ಸಂಭವಿಸಿದ ಕಳ್ಳತನದ ಪ್ರಕರಣದ ವಿವರ ಕೆಳಕಂಡಂತಿದೆ.

ದಿನಾಂಕ 19-11-1991ರಲ್ಲಿ ಒಟ್ಟು ಸುಮಾರು 54,671.00 ರೂ. ಮೌಲ್ಯದ ಕೆಳಕಂಡ ವಸ್ತುಗಳು ಕಳ್ಳತನವಾಗಿರುತ್ತದೆ.

1. ಅಲ್ಯೂಮಿನಿಯಂ ತಂತಿ - 11.38 ಕಿ.ಮಿ.
2. 'ಏ' ಆಕಾರದ ಅಡ್ಡಪಟ್ಟಿ - 4
3. 11 ಕೆವಿ ವರ್ಗದ ನಿರೋಧಕ (ಇನ್ಸುಲೇಟರ್)- 39
4. ಮುರಿದ ಕಂಬಗಳು - 13

ಈ ಕಳ್ಳತನಕ್ಕೆ ಸಂಬಂಧಿಸಿದಂತೆ, ಪೋಲೀಸ್ ತನಿಖೆ ಪ್ರಗತಿಯಲ್ಲಿದೆ. ಇದೇ ಅವಧಿಯಲ್ಲಿ ಹೊನ್ನಾವರ ತಾಲ್ಲೂಕಿನಲ್ಲಿ ಸಂಭವಿಸಿದ ಕಳ್ಳತನದ ಪ್ರಕರಣದ ವಿವರ ಕೆಳಕಂಡಂತಿದೆ.

ದಿನಾಂಕ 20-1-1993ರಂದು ಒಟ್ಟು ಸುಮಾರು 60,000-00 ರೂ. ಮೌಲ್ಯದ ಕೆಳಕಂಡ ವಸ್ತುಗಳು ಕಳ್ಳತನವಾಗಿರುತ್ತದೆ.

1. ಅಲ್ಯೂಮಿನಿಯಂ ತಂತಿ -6.4 ಕಿ.ಮಿ.
2. ಪಿ. ಸಿ. ಸಿ. ಕಂಬಗಳು - 3
3. ಜೋಡಿ ಕಂಬ ರಚನೆ ಸಮುಚ್ಛಯ - 1
4. 11 ಕೆವಿ ವರ್ಗದ ಪಿನ್ ನಿರೋಧಕ (ಇನ್ಸುಲೇಟರ್) - 90
5. ನಂ. 15 ಸ್ಟೈನ್ ನಿರೋಧಕ (ಇನ್ಸುಲೇಟರ್) - 96
6. ಸಮತಳ ಅಡ್ಡಪಟ್ಟಿ - 30

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಪೋಲೀಸರಿಂದ ಇಬ್ಬರು ವ್ಯಕ್ತಿಗಳು ಬಂಧಿಸಲ್ಪಟ್ಟು ನಂತರ ಜಾಮೀನಿನ ಮೇಲೆ ಬಿಡುಗಡೆ ಆಗಿದ್ದಾರೆ ಮತ್ತು ಪೋಲೀಸ್ ತನಿಖೆಯು ಪ್ರಗತಿಯಲ್ಲಿದೆ.

ಶ್ರೀ ಆರ್. ಎನ್. ನಾಯ್ಕ : ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರವಾಗಿ ರಾಜ್ಯದಲ್ಲಿ ಸುಮಾರು ಒಂದು ವರ್ಷದ ಅವಧಿಯಲ್ಲಿ ಅರ್ಧ ಕೋಟಿ ರೂಪಾಯಿಗಳ ವಿದ್ಯುತ್ ಸಂಪರ್ಕ ಕಲ್ಪಿಸುವ ವಸ್ತುಗಳು ಕಳುವಾಗಿವೆಯೆಂದು ಬಂದಿದೆ. ಮತ್ತೆ ನಾನು ಭಟ್ಕಳ ಮತ್ತು ಹೊನ್ನಾವರ ತಾಲ್ಲೂಕಿನ ಬಗ್ಗೆ ಕೇಳಿದ್ದೆ. 1991ರಲ್ಲಿ ಸುಮಾರು 54 ಸಾವಿರ ರೂಪಾಯಿಗಳಷ್ಟು ವಸ್ತುಗಳು ಕಳವು ಆಗಿದ್ದು, ಇದುವರೆಗೂ ಪತ್ತೆ ಕಾರ್ಯ ಪ್ರಗತಿಯಲ್ಲಿದೆ, ಪೋಲೀಸರು ತನಿಖೆ ಮುಂದುವರಿಸುತ್ತಿದ್ದಾರೆಂದು ಉತ್ತರ ಬಂದಿದೆ. ಆದರೆ ವಿಷಯ ಏನೆಂದರೆ, ಕೆಇಬಿಯ ಭಟ್ಕಳ ಆಫೀಸಿನಲ್ಲಿ ಕಳವಾಗಿದೆ ಎಂದು ಪೋಲೀಸರಿಗೆ ಕಂಪ್ಲೆಂಟ್ ಕೊಟ್ಟಿದ್ದುದು ನಿಜ. ಆದರೆ ವಸ್ತುಗಳು ಕಳವು ಆಗದೇ ಇರುವುದೂ ನಿಜ. ವಿದ್ಯುತ್ ಮಂಡಲಿಯವರೇ ಈ ವಸ್ತುಗಳನ್ನು ಅಲ್ಲಿಯ ಕಂಟ್ರಾಕ್ಟರುಗಳಿಗೆ ಮಾರಿ ಅದು ಕಳುವಾಗಿದೆ ಎಂದು ಪೋಲೀಸ್‌ರಿಗೆ ಕಂಪ್ಲೇಂಟ್ ಕೊಟ್ಟಮೇಲೆ ಪೋಲೀಸರೂ ಹುಡುಕುವುದಕ್ಕಾಗುವುದಿಲ್ಲ. ಇದು ಪೋಲೀಸರಿಗೂ ಗೊತ್ತಿದೆ. ಕೆ.ಇ.ಬಿ.ಯವರಿಗೂ ಗೊತ್ತಿದೆ. ಈ ವಿಚಾರ ಭಟ್ಕಳದಲ್ಲಿ ಮನೆ ಮಾತಾಗಿದ್ದು, ಅಲ್ಲಿ ಕಂಬವನ್ನಾ ಹಾಕಿಲ್ಲ, ವೈರನ್ನೂ ಎಳೆದಿಲ್ಲ. ಆದರೆ ಕಳವು ಆಗಿದೆ ಎಂದು ಹೇಳಿದ್ದಾರೆ. ಇಂತಹ ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ ಆಗಿದೆ ಎಂದು ರಿಪೋರ್ಟ್ ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ತಿಳಿದುಕೊಳ್ಳಬೇಕು. ಇನ್ನೊಂದು ಪ್ರಕರಣದಲ್ಲಿ ಹೊನ್ನಾವರ ತಾಲ್ಲೂಕಿನಲ್ಲಿ 60 ಸಾವಿರ ರೂಪಾಯಿ ಬೆಲೆಬಾಳುವ ವಸ್ತುಗಳ ಕಳುವು ಆಗಿದೆ ಎಂದು ಹೇಳಿದ್ದಾರೆ. ಅದು ಇನ್ನೂ ಜಾಸ್ತಿ ಇದೆ. ಇದರಲ್ಲಿ ತನಿಖೆ ನಡೆಯುತ್ತಿದೆ ಎಂದು ಹೇಳಿದ್ದಾರೆ. ಇದರಲ್ಲಿ ಒಬ್ಬ ಪೋಲೀಸರು ಆರೋಪಿಗಳಿಗೆ ಶಾಮೀಲು ಆಗಿರುವುದರಿಂದ ಒಬ್ಬ ಸಬ್‌ಇನ್ಸ್‌ಪೆಕ್ಟರನ್ನು ಸಸ್ಪೆಂಡ್ ಮಾಡಿದ್ದಾರೆ. ಅದನ್ನು ಇಲ್ಲಿ ಹೇಳಿಲ್ಲ. ಇದರಲ್ಲೂ ಹಾಗೆಯೇ ಆಗಿದೆ. ಇಲ್ಲಿ ಕೆಇಬಿನವರು, ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಮತ್ತು ಕಳ್ಳರು ಈ ಪ್ರಕಾರ ಜನರು ಸೇರಿ ಈ ಪ್ರಕರಣ ಮಾಡಿರುವುದರಿಂದ ಊರಿನ ಜನರೇ ಕಳ್ಳರನ್ನು ಹಿಡಿದುಕೊಟ್ಟರೂ ಸಹ ಬಿಟ್ಟಿದ್ದರಿಂದ ಪೋಲೀಸರು ಸಸ್ಪೆಂಡ್ ಆಗಿದ್ದಾರೆ. ಇಲ್ಲಿ ಕೆಇಬಿಯವರೇ ಕಳ್ಳರಾಗಿದ್ದಾರೆ. ಭಟ್ಕಳ, ಹೊನ್ನಾವರದಲ್ಲಿ ಸ್ಥಳೀಯ ಅಧಿಕಾರಿಗಳು ಹತ್ತು - ಹದಿನೈದು ವರ್ಷಗಳಿಂದ ಅವರು ನೆಲೆನಿಂತವರಿದ್ದಾರೆ. ಇವರೇ ಅಲ್ಲಿ ಕಳ್ಳರಾಗಿದ್ದಾರೆ. ಇವತ್ತು ಈ ಎರಡು ಪ್ರಕರಣಗಳು ಅಷ್ಟೇ ಅಲ್ಲ ಇಂತಹ ಎಷ್ಟೋ ಸಣ್ಣಪುಟ್ಟ ಪ್ರಕರಣಗಳು ಆಗಿದ್ದು ಅವುಗಳು ದಾಖಲೆ ಆಗಿಲ್ಲ. ಆದ್ದರಿಂದ ಈ ಎರಡು ಪ್ರಕರಣಗಳನ್ನು ಸಿಓಡಿ ಅವರಿಗೆ ಕೊಟ್ಟರೆ ಯಾರು ಕಳ್ಳರು ಎಂದು ತನ್ನಿಂತಾನೇ ಹೊರಬರುತ್ತದೆ. ಆ ರೀತಿ ಪ್ರಯತ್ನ ಮಾಡುತ್ತೀರ ಎಂದು ಕೇಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ಕೆಲವು ವಿಚಾರಗಳನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಈ ಕಳವು ಪ್ರಕರಣದಲ್ಲಿ ಒಬ್ಬ ರಮೇಶ್ ಹೆಗ್ಡೆ ಹಾಗೂ ಖಲೀಸಾದಾಗರ್ ಎನ್ನುವವರನ್ನು ದಸ್ತಗಿರಿ ಮಾಡಿದ್ದು ಅನಂತರ ಅವರು ಬೇಲ್

ಮೇಲೆ ಬಿಡಿಸಿಕೊಂಡು ಹೊರಗಡೆ ಬಂದಿದ್ದಾರೆ. ಪೋಲೀಸರು ಈ ವಿಚಾರಗಳ ಬಗ್ಗೆ ಇನ್‌ವೆಸ್ಟಿಗೇಷನ್ ನಡೆಸುತ್ತಿದ್ದಾರೆ. ಇಷ್ಟು ನನಗೆ ಬಂದಿರತಕ್ಕ ಸುದ್ದಿ. ಮತ್ತೆ ಮಾನ್ಯ ಸದಸ್ಯರಾದ ನಾಯಕ್ ಅವರು ಕೆಲವು ಅಧಿಕಾರಿಗಳು ಬಹಳ ವರ್ಷಗಳಿಂದ ಇಲ್ಲಿ ಇದ್ದಾರೆ. ಅವರು ಅಲ್ಲಿ ನಡೆಯುತ್ತಿರತಕ್ಕ ಕಳ್ಳತನಗಳಿಗೆ ಶಾಮಿಲು ಆಗಿದ್ದಾರೆನ್ನುವ ಆರೋಪ ಮಾಡಿದ್ದಾರೆ. ಇದರ ಬಗ್ಗೆ ನಾನು ತನಿಖೆ ಮಾಡಿಸುತ್ತೇನೆ.

ಶ್ರೀ ಆರ್. ಎನ್. ನಾಯ್ಕ್ : ಮಾನ್ಯ ಅಧ್ಯಕ್ಷರೇ, ಈಗ ಕೋರ್ಟ್‌ಗೆ ಎಫ್‌ಐಆರ್ ಏನು ಕೊಟ್ಟಿದ್ದಾರೆ ಅದರಲ್ಲಿ ಇನ್ನೂ 7-8 ಜನರ ಹೆಸರುಗಳನ್ನು ಹಾಕಿದ್ದಾರೆ. ಅವರು ಊರಿನಲ್ಲಿಯೇ ಅಡ್ಡಾಡುತ್ತಿದ್ದಾರೆ. ಅವರು ಪಂಡಿತ್ ಎನ್ನುವ ಕಂಟ್ರಾಕ್ಟರದಾರರ ಕೆಲಸಗಾರರು. ಅವರು ವೈರ್ ತೆಗೆದುಕೊಂಡು ಬಂದಾಗ ಟ್ರಕ್ ಹಿಡಿದು ರಮೇಶ್ ಎನ್ನುವ ಡ್ರೈವರ್ ಹಾಗೂ ಸಾದಾಗರ್ ಎನ್ನುವವರನ್ನು ಜನರು ಪೋಲೀಸರಿಗೆ ಹಿಡಿದುಕೊಟ್ಟಿದ್ದಾರೆ. ಹೀಗಿದ್ದರೂ ಸಹ ಅವರನ್ನು ಪೋಲೀಸರು ಬಿಟ್ಟಿದ್ದಾರೆ. ಇನ್ನೂ 7-8 ಜನ ಅದಕ್ಕೆ ಸಂಬಂಧ ಪಟ್ಟವರು ಹಾಗೆಯೇ ಓಡಾಡುತ್ತಿದ್ದಾರೆ. ಅದೂ ಜನರು ಗದ್ದಲ ಮಾಡಿದರು ಎನ್ನುವ ಕಾರಣಕ್ಕೆ ಇಷ್ಟೆಲ್ಲಾ ಅವರು ಮಾಡಿದರು ಅಷ್ಟೇ.

ಆಮೇಲೆ ಅವರನ್ನು ಬಿಟ್ಟುಬಿಟ್ಟಿದ್ದಾರೆ. ಇದು ಏನಾಗಿದೆ ಎಂದರೆ ಕಳ್ಳ ಒಬ್ಬ 3 ಕೋಟಿ ರೂಪಾಯಿಯ ಕಂಟ್ರಾಕ್ಟ್‌ನ್ನು ಆ ಕೊಂಕಣ ರೈಲ್ವೆ ಕನೆಕ್ಷನ್ ಕೊಡುವುದಕ್ಕೆ ತೆಗೆದುಕೊಂಡಿದ್ದಾನೆ. ಆತ ಏನು ಮಾಡುತ್ತಾನೆ ಎಂದರೆ ಇದನ್ನು ಕದ್ದು ಕದ್ದು ಮಾಡುತ್ತಿರುತ್ತಾನೆ. ಇದು ಕೆ. ಇ. ಬಿ.ಗೂ ಗೊತ್ತಿದೆ. ಅದರ ಬಗ್ಗೆ ತಾವು ಸಿ.ಓ.ಡಿ ಗೆ ಹಾಕುವುದು ಒಳ್ಳೆಯದು. ನಿಮ್ಮಿಂದ ಆಶ್ವಾಸನೆ ಬರಲಿ ಎನ್ನುವ ಕಾರಣಕ್ಕೆ ಈ ಪ್ರಶ್ನೆಯನ್ನು ಕೇಳಿದ್ದುದು.

ಶ್ರೀ ಎಸ್. ಎಂ. ಕೃಷ್ಣ : ಇದರ ಬಗ್ಗೆ ಇನ್ನೂ ಹೆಚ್ಚು ವಿವರಗಳನ್ನು ನನಗೆ ಒದಗಿಸಿಕೊಟ್ಟರೆ ಅದರ ಮೇಲೆ ವಿಚಾರಣೆ ಮಾಡಿ ಮಾನ್ಯ ಸದಸ್ಯರಿಗೆ ನಾನು ಏನು ಆಕ್ಷನ್ ತೆಗೆದುಕೊಳ್ಳುತ್ತೇನೆ ಎನ್ನುವುದನ್ನು ತಿಳಿಸುತ್ತೇನೆ.

ಶ್ರೀ ಆರ್. ಎನ್. ನಾಯಕ್ : ಸಿ. ಓ. ಡಿ.ಗೆ ಹಾಕುವುದಕ್ಕೆ ತಾವು ಪ್ರಯತ್ನ ಮಾಡಬಹುದಲ್ಲ. ಸಿ. ಓ. ಡಿ. ತನಿಖೆಗೆ ಏನು ಪ್ರಾಬ್ಲಮ್ ಇದೆ. ತಾವು ವಿಚಾರ ಮಾಡಿ.

ಶ್ರೀ ಎಸ್. ಎಂ. ಕೃಷ್ಣ : ನಮ್ಮ ಕೈಯಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗದೆ ಇದ್ದರೆ, ಆಮೇಲೆ ಸಿ. ಓ. ಡಿ. ತನಿಖೆಗೆ ಕೊಡಿಸೋಣ. ಮೊದಲು ನನಗೆ ತಲುಪಿಸಿ, ಆನಂತರ ನನಗೆ ಸಾಧ್ಯವಾಗದೇ ಇದ್ದರೆ ಸಿ. ಓ. ಡಿ. ಕಳುಹಿಸುತ್ತೇನೆ.

ವಿಷಯ : ಕೊರಟಗೆರೆ ತಾಲ್ಲೂಕು ಕೋಳಾಲ ಗ್ರಾಮದಲ್ಲಿ ವಿದ್ಯುತ್ ಉಪ ಕೇಂದ್ರದ ಸ್ಥಾಪನೆ.

Q : 1072.

ಶ್ರೀ ಸಿ. ವೀರಭದ್ರಯ್ಯ (ಕೊರಟಿಗೆರೆ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ